ಇ) ಮೀನುಗಾರಿಕೆಗೆ ಸಂಬಂಧಿಸಿದಂತೆ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ನೂತನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ದಾವಣಗೆರೆ, ಹಾವೇರಿ, ಶಿವಮೊಗ್ಗ, ಧಾರವಾಡ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರೂ. 13.40 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಮೂಲಭೂತ ಸೌಕರ್ಯಗಳಾದ ಉತ್ಪಾದನ ಘಾರಂಗಳನ್ನು ಸೃಜಿಸಲು, ಮೀನುಗಾರಿಕೆ ಪರಿಕರಗಳನ್ನು ಪೂರೈಸಲು, ತರಬೇತಿ ಮತ್ತು ವಿಸ್ತರಣಾ ಸೇವೆಗಳನ್ನು ನೀಡಲು, ಮಾರಾಟ ನೆರವು ಹಾಗೂ ಕೆರೆಗಳ ಅಭಿವೃದ್ಧಿ ಮುಂತಾದ ಘಟಕಾಂಶವನ್ನು ಹೊಂದಿರುತ್ತದೆ.
2. ಕೇಂದ್ರ ವಲಯ ಪ್ರಾಯೋಗಿಕ ಜಲಾಶಯಗಳ ಅಭಿವೃದ್ಧಿ ಯೋಜನೆಯಡಿ ಮಾಕೋನಹಳ್ಳಿ ಹಾಗೂ ಹೆಸರಘಟ್ಟ ಜಲಾಶಯಗಳನ್ನು ರೂ. 16.25 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.
3. "ಮತ್ಸ್ಯವಾಹಿನಿ" ಯೋಜನೆಯಡಿ ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತವಾದ ಸಾಗಾಣಿಕೆಗಾಗಿ ಮೀನುಗಾರರಿಗೆ ತ್ರಿಚಕ್ರ ವಾಹನವನ್ನು ಖರೀದಿಸಲು ಶೇಕಡ 25 ರಷ್ಟು ಗರಿಷ್ಠ ರೂ. 25,000/--ಗಳ ಸಹಾಯ ಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.
4. ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ ಯೋಜನೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳ ಆಧುನೀಕರಣ.

ಹಿಂದುಳಿದ ವರ್ಗಗಳ ಆಯೋಗದಲ್ಲಿ ಮುಂದೆ ಇರತಕ್ಕ ಅರ್ಜಿಗಳು

4204 (4928) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಹಾಗೂ ಪೂರ್ಣಸದಸ್ಯರ ನೇಮಕ ಮಾಡಲಾಗಿದೆಯೇ; ಅಂತಹವರುಗಳ ವಿದ್ಯಾರ್ಹತೆ ಜಾತಿವಾರು ಹೆಸರು ಸಹಿತ ಅವರ ಸಂಖ್ಯೆಯ ವಿವರ ಒದಗಿಸುವುದು.

ಆ) ಆಯೋಗದ ಸದಸ್ಯರ ಆಯ್ಕೆಗೆ ಅನುಸರಿಸುವ ಮಾನದಂಡಗಳೇನು?

ಇ) ಈ ಆಯೋಗದ ಮುಂದೆ ಇತ್ಯರ್ಥವಾಗಬೇಕಾಗಿರುವ ಅರ್ಜಿಗಳೆಷ್ಟು?

ಈ) ಅಂತಹ ಅರ್ಜಿಗಳಲ್ಲಿ ಎಷ್ಟನ್ನು ಪರಿಶೀಲಿಸಿ, ತೀರ್ಮಾನ ಕೈಗೊಂಡಿದ್ದಾರೆ (ವಿವರ ಒದಗಿಸುವುದು)

ಉ) ಈಗಿನ ಆಯೋಗದ ಅಧಿಕಾರಾವಧಿ ಯಾವಾಗ ಮುಗಿಯುತ್ತದೆ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಹೌದು, ಅಧ್ಯಕ್ಷರು ಮತ್ತು ಸದಸ್ಯರ ವಿವರಗಳು ಹೀಗಿವೆ.

ಕ್ರ. ಸಂ.	ಹೆಸರು ಶ್ರೀಯುತರು	ವಿದ್ಯಾರ್ಹತೆ	ಜಾತಿ
1.	ಎಸ್. ಮುನಿರಾಯ ಅಧ್ಯಕ್ಷರು	ಬಿ.ಎಸ್.ಸಿ. ಎಲ್.ಎಲ್.ಬಿ	ರಾಜು ಕ್ಷತ್ರಿಯ
2.	ಪ್ರಭಾಕರ್ ಆರ್. ತೇಲ್ಕರ್, ಸದಸ್ಯರು	ಬಿ.ಎ., ಎಲ್.ಎಲ್.ಬಿ.	ಭಾವಸಾರ ಕ್ಷತ್ರಿಯ
3.	ಡಾ: ಬಿ.ಕೆ. ರವಿ, ಸದಸ್ಯರು (ಸಮಾಜ ವಿಜ್ಞಾನಿ)	ಎಂ.ಎ., ಎಂ.ಎಸ್.ಸಿ	ಕುರುಬ
4.	ಎಸ್. ಸಿದ್ದಗಂಗಯ್ಯ, ಸದಸ್ಯರು	ಬಿಕಾಂ, ಎಲ್.ಎಲ್.ಬಿ. ಕೆ.ಎ.ಎಸ್. (ನಿವೃತ್ತಿ)	ತಿಗಳ
5.	ಯು.ಭೂಪತಿ, ಸದಸ್ಯರು	ಬಿ.ಎಸ್.ಸಿ	ಉಪ್ಪಾರ
6.	ಎಸ್.ವಿ. ಅಮೀನ್, ಸದಸ್ಯರು	ಬಿಕಾಂ. ಎಲ್.ಎಲ್.ಬಿ	ಬಿಲ್ಲವ

ಆ) ಹಿಂದುಳಿದ ವರ್ಗಗಳ ಆಯೋಗದ 1995ರ ಕಾಯಿದೆಯ ಅಧಿನಿಯಮ 3ರ ನಿಯಮಗಳಲ್ಲಿ ಆಯೋಗದ ಸದಸ್ಯರ ಆಯ್ಕೆಗೆ ಮಾನದಂಡ ನಿಗಧಿಪಡಿಸಲಾಗಿದೆ. ಹಿಂದುಳಿದ ವರ್ಗಗಳ ವಿಷಯದಲ್ಲಿ ವಿಶೇಷ ಜ್ಞಾನವುಳ್ಳ 5 ಜನ ಸದಸ್ಯರು, ಅವರುಗಳಲ್ಲಿ ಒಬ್ಬರು ಸಮಾಜ ವಿಜ್ಞಾನಿಯಾಗಿರಬೇಕು

ಇ) ಒಟ್ಟು 220 ಜಾತಿಗಳಿಗೆ ಸಂಬಂಧಿಸಿದಂತೆ 310 ಅರ್ಜಿಗಳು ಇತ್ಯರ್ಥಕ್ಕಾಗಿ ಆಯೋಗದ ಮುಂದಿವೆ.

ಈ) ಪರ್ಯಾಯ ಪದಗಳ ಸೇರ್ಪಡೆಗೆ ಕೋರಿ ಬಂದ 25 ಪ್ರಕರಣಗಳ ಬಗ್ಗೆ ಆಯೋಗವು ತೀರ್ಮಾನ ಕೈಗೊಂಡಿದೆ. ಆದರೆ ಈ ಬಗ್ಗೆ ಆಯೋಗದಿಂದ ಸರ್ಕಾರಕ್ಕೆ ವರದಿ ಬಂದಿರುವುದಿಲ್ಲ.

ಉ) ಆಯೋಗದ ಅಧ್ಯಕ್ಷರು ಸದಸ್ಯರು 5 ವರ್ಷಗಳ ಅವಧಿಗೆ ನೇಮಕವಾಗಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಹೆಸರು ಶ್ರೀಯುತ	ಅಧಿಕಾರಾವಧಿ ಮುಗಿಯುವ ದಿನಾಂಕ
1.	ಎಸ್. ಮುನಿರಾಜು, ಅಧ್ಯಕ್ಷರು	20.05.2004
2.	ಪ್ರಭಾಕರ್ ಆರ್. ತೇಲ್ಕರ್, ಸದಸ್ಯರು	14.03.2005
3.	ಡಾ: ಬಿ.ಕೆ. ರವಿ, ಸದಸ್ಯರು	10.03.2005
4.	ಎಸ್. ಸಿದ್ದಗಂಗಯ್ಯ, ಸದಸ್ಯರು	17.05.2005
5.	ಯು.ಭೂಪತಿ, ಸದಸ್ಯರು	17.05.2005
6.	ಎಸ್.ವಿ. ಅಮೀನ್, ಸದಸ್ಯರು	17.05.2005

ರಾಜ್ಯದಲ್ಲಿ ಹೊಸಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಿರುವ ಬಗ್ಗೆ

4205 (4929) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?